ಇಂದು ದಿ:**01-07-2026 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಯನ್ನು ಪುನಃ ಕರೆಯಿ**ಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ಯು ವಕೀಲರಿಂದ 2 ರಿಂದ 4 ಪ್ರತಿವಾದಿಯ ಪರಃ**

ನನ್ನ ಅಜ್ಜ ರೇವಣಸಿದ್ದಪ್ಪ ಈತನಿಗೆ ನನ್ನ ತಾಯಿ ಕೊನೆಯ ಮಗಳು ಎಂದರೆ ಸರಿ. 1996 ರಲ್ಲಿ ನನ್ನ ತಾಯಿಯ ವಯಸ್ಸು ಸುಮಾರು 36 ರಿಂದ 38 ಇದ್ದಿರಬಹುದು. ನನ್ನ ತಾಯಿಯ ಜನ್ಮ ದಿನಾಂಕ:01-01-1961 ಇರುತ್ತದೆ. 1977-78 ರಲ್ಲಿ ನನ್ನ ತಾಯಿಯ ಮದುವೆ ಆಗಿರುತ್ತದೆ. ಆ ಸಮಯದಲ್ಲಿ ನನ್ನ ತಾಯಿ ವಯಸ್ಕರರು ಇದ್ದರು ಎಂದರೆ ಸರಿ. 1996 ರ ಪೂರ್ವದಲ್ಲಿ ಸಹ ನನ್ನ ತಾಯಿ ವಯಸ್ಕರಳು ಇದ್ದು, ತಿಳುವಳಿಕೆ ಇತ್ತು ಎಂದರೆ ಸರಿ. ನನ್ನ ತಾಯಿಯ ಮದುವೆಯ ಖರ್ಚನ್ನು ನನ್ನ ಅಜ್ಜ ಮತ್ತು ನನ್ನ ತಾಯಿಯ ಸಹೋದರರು ನೋಡಿಕೊಂಡಿರುತ್ತಾರೆ. ಸಾಕ್ಷಿ ನನ್ನ ತಾಯಿಯ ಮದುವೆಯ ಜೊತೆಗೆ 2 ನೇ ಪ್ರತಿವಾದಿಯ ಮದುವೆ ಸಹ ಅದೇ ಮುಹೂರ್ತದಲ್ಲಿ ಆಗಿದ್ದು, ನನ್ನ ತಂದೆಯ ಸಹೋದರಿಯನ್ನು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಸೋದರ ಅತ್ತೆಯ ಹೆಸರು ಮಂಜಮ್ಮ ಎಂದು ಇರುತ್ತದೆ. ಮದುವೆಯ ಸಮಯದಲ್ಲಿ ನನ್ನ ತಾಯಿಗೆ ಕೊಡಬೇಕಾದ ಒಡುವೆ ಮತ್ತು ಹಣ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಆ ಸಮಯದಲ್ಲಿ ತವರು ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿ. ತವರು ಮನೆಯಲ್ಲಿ ಬಂದರೆ ಒಂದೆರಡು ತಿಂಗಳು ಇರುತ್ತಿದ್ದರು ಎಂದರೆ ಸರಿಯಲ್ಲ. ಒಂದು ವಾರ ಹೀಗೆ ಇರುತ್ತಿದ್ದರು ಎಂದರೆ ಸರಿ. ತವರು ಮನೆಯಲ್ಲಿ ನಡೆಯುತ್ತಿದ್ದ ವಿಷಯಗಳ ಬಗ್ಗೆ ನನ್ನ ತಾಯಿಗೆ ಗೊತ್ತಾಗುತ್ತಿತ್ತು ಎಂದರೆ ಸರಿ.

ನನ್ನ ತಾಯಿಯ ಮದುವೆಯ ನಂತರ, ನನ್ನ ಅಜ್ಜ ರೇವಣಸಿದ್ದಪ್ಪ ತೀರಿಕೊಂಡರು. ನನ್ನ ಅಜ್ಜಿ 1993 ರಲ್ಲಿ ತೀರಿಕೊಂಡರು. ನನ್ನ ಅಜ್ಜ ತೀರಿಕೊಳ್ಳುವ ಸಮಯದಲ್ಲಿ

ನನ್ನ ತಾಯಿಯ ಮದುವೆ ಆಗಿತ್ತು ಎಂದರೆ ಸರಿ ಮತ್ತು ಆಕೆಗೆ ತಿಳುವಳಿಕೆ ಇತ್ತು ಎಂದರೆ ಸರಿ. 1, 2 ಮತ್ತು 7 ನೇ ಪ್ರತಿವಾದಿ ಸೇರಿ 1993 ರಲ್ಲಿ ಜುಬಾನಿ ಹಿಸ್ಸೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ನನ್ನ ತಾಯಿಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಈ ವಿಷಯ ನನ್ನ ತಾಯಿಗೆ ಆಗಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಜುಬಾನಿ ಹಿಸ್ಸೆಯ ಬಗ್ಗೆ ನನ್ನ ತಾಯಿಗೆ ಗೊತ್ತಿರುವ ಕಾರಣ, ಒಂದು ವೇಳೆ ಆಕೆ ಈ ದಾವೆಯಲ್ಲಿ ಸಾಕ್ಷಿ ಹೇಳಿದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ನಾನು ಜಿ.ಪಿ.ಎ ಪಡೆದಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ01-07-1996 ರಂದು ಜುಬಾನಿ ಹಿಸ್ಸೆಯ ಪ್ರಕಾರ 1,2 ಮತ್ತು 7 ನೇ ಪ್ರತಿವಾದಿಗಳು ನೊಂದಾಯಿತ ಪಾಲುವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾಯಿಗೆ ಗೊತ್ತಿರಲಿಲ್ಲ, ಆಕೆ ಪಾರ್ಟಿ ಅಲ್ಲ ಎಂದು ಹೇಳುತ್ತಾರೆ. ಸದರಿ ಪಾಲುವಿಭಾಗ ಪತ್ರ ನಿ.ಪಿ-11 ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರ ಎಲ್ಲರ ಒಪ್ಪಿಗೆಯಿಂದ ಆದ ವಿಭಾಗ ಪತ್ರ ಎಂದರೆ ಸರಿಯಲ್ಲ. 1996 ರ ನೊಂದಾಯಿತ ಪಾಲುವಿಭಾಗ ಪತ್ರದ ಪ್ರಕಾರ ಅವರವರ ಹೆಸರಿಗೆ ಖಾತೆ ಬದಲಾಣೆ ಆಗಿ ಪಹಣಿ ಸಹ ಓಡುತ್ತಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಬಂದ ಹಿಸ್ಸೆಯನ್ನು ಆತ ಮತ್ತು ಆತನ ಮಕ್ಕಳು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ06-04-2016 ರಂದು 2 ನೇ ಪ್ರತಿವಾದಿ ತನ್ನ ಹಿಸ್ಸೆಗೆ ಬಂದ ಆಸ್ತಿಗಳ ಕುರಿತು ತನ್ನ ಮತ್ತು ತನ್ನ ಮಕ್ಕಳ ನಡುವೆ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿನಾಂಕಃ04-05-2007 ರಂದು 1, 2 ಮತ್ತು 7 ನೇ ಪ್ರತಿವಾದಿಯರು ಉಳಿದಿದ್ದ ಮನೆ ಮತ್ತು ನಿವೇಶನಗಳನ್ನು ಪಾಲುವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾಯಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂದು ಹೇಳುತ್ತಾರೆ. ಈ ವಿಷಯ ಸಹ ನನ್ನ ತಾಯಿಗೆ ಗೊತಿತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1996 ರಲ್ಲಿ ತಮಗೆ ಬಂದ ಆಸ್ತಿಗಳ ಕುರಿತು ತಮ್ಮ ಮತ್ತು 3 ರಿಂದ 5, 16 ನೇ ಪ್ರತಿವಾದಿಗಳ ನಡುವೆ ಪಾಲುವಿಭಾಗ

ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ತನ್ನ ಹಿಸ್ಸೆಗೆ ಬಂದ ಆಸ್ತಿಯನ್ನು ಮಂಜಮ್ಮ ಇವರಿಗೆ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಮಂಜಮ್ಮ ಇವಳ ಹೆಸರಿಗೆ ಖಾತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾಯಿಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಈ ಎಲ್ಲಾ ವ್ಯವಹಾರಗಳ ಬಗ್ಗೆ ನನ್ನ ತಾಯಿಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಆಕೆಯ ಉಳಿದ ಸಹೋದರಿಯರಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಿ.ಪಿ-10 ವಂಶವೃಕ್ಷಕ್ಕೆ ನನ್ನ ತಾಯಿ ಮಾಹಿತಿಕೊಟ್ಟಿರುತ್ತಾರೆ. ಆಕೆ ಸದರಿ ಪ್ರಮಾಣಪತ್ರ ಮಾಡಿಸಿದ್ದಾಳೆ ಎಂದರೆ ಸರಿ. ನನ್ನ ತಾಯಿ ಸದರಿ ವಂಶವೃಕ್ಷಕ್ಕೆ ಮಾಹಿತಿಕೊಟ್ಟಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಮತ್ತು ಆಕೆಯ ಸಹೋದರಿಯರಿಗೆ ಅವರವರ ಮದುವೆಯಲ್ಲಿ ಕೊಡಬೇಕಾದ ಹಣ ಮತ್ತು ಬಂಗಾರ ಕೊಟ್ಟಿರುವ ಕಾರಣ, ದಾವಾ ಆಸ್ತಿಗಳಲ್ಲಿ ಅವರಿಗೆ ಯಾವುದೇ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ಪಾಲುವಿಭಾಗ ಪತ್ರಗಳ ಬಗ್ಗೆ ನನ್ನ ತಾಯಿಗೆ ಆಗಲೇ ಗೊತ್ತಿದ್ದರೂ ನನ್ನ ತಂದೆ ಮತ್ತು ನನ್ನ ಚಿತಾವಣೆಯ ಮೇರೆಗೆ ಈ ದಾವೆಯನ್ನು ನನ್ನ ತಾಯಿಯ ಮೂಲಕ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ 2019ರಲ್ಲಿ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. 2019ರ ಪೂರ್ವದಲ್ಲಿಯೇ ನನ್ನ ತಾಯಿಯ ತವರು ಮನೆಯಲ್ಲಿ ನಡೆಯುತ್ತಿದ್ದ ವ್ಯವಹಾರಗಳ ಬಗ್ಗೆ ಎಲ್ಲಾ ಮಾಹಿತಿ ಇತ್ತು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ 2 ರಿಂದ 4 ನೇ ಪ್ರತಿವಾದಿಯರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.